ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 1702/2018

ಚಾಸಾ: 7 ಪ್ರಾಸಾ:7

ದಿನಾಂಕ: 05.06.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಧುಸೂದನ |
| ತಂದೆಯ ಹೆಸರು | : | ರತ್ನಾಕರ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2016 ರಿಂದ 2022ರವರೆಗೆ ಕುಂದಾಪುರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 24-11-2017 ರಂದು ಸಂಜೆ 4-30ರ ವೇಳೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ1 ರವರಿಗೆ ಬಾತ್ಮಿದಾರರು ಕರೆ ಮಾಡಿ ಹೆಸ್ಕತ್ತೂರು ಗ್ರಾಮದ ಹರಿಯಾಡಿ ಎಂಬಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ನೀಡಿದ್ದು, ಸದ್ರಿ ಮಾಹಿತಿಯ ಆಧಾರದ ಮೇಲೆ ಠಾಣಾ ಸಿಬ್ಬಂದಿಗಳಾದ ನಾನು, ಚಾಸಾ-1 ಮತ್ತು 8 ರವರೊಂದಿಗೆ ಇಲಾಖಾ ವಾಹನದಲ್ಲಿ ಚಾಲಕನಾಗಿ ಆನಂದ್ ರವರನ್ನು ಕರೆದುಕೊಂಡು ಹೊರಟು, ಹೆಸ್ಕತ್ತೂರು ಜಂಕ್ಷನ್ ನ ಬಳಿ ಕಾಣಸಿಕ್ಕ ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರನ್ನು ಅಕ್ರಮ ಮರುಳುಗಾರಿಕೆ ವೇಳೆಗೆ ದಾಳಿ ಮಾಡುವ ಸಮಯದಲ್ಲಿ ಸಹಕರಿಸುವಂತೆ ಕೋರಿ, ನೋಟೀಸನ್ನು ನೀಡಿ ಸಹಿ ಪಡೆದು ನಂತರ ಸಂಜೆ 5 ಗಂಟೆಗೆ ಹೆಸ್ಕತ್ತೂರು ಗ್ರಾಮದ ಹರಿಯಾಡಿಗೆ ತಲುಪಿ ಅಲ್ಲಿ ಒಂದು ಟಿಪ್ಪರ್ ವಾಹನ ದಬ್ಬೆ ಕಟ್ಟೆಗೆ ಚಲಿಸುತ್ತಿದ್ದು ಅದನ್ನು ತಡೆದು ನಿಲ್ಲಿಸಿದಾಗ ಅದರ ಚಾಲಕ ನಮ್ಮನ್ನು ನೋಡಿ ವಾಹನವನ್ನು ಅಲ್ಲೇ ಬಿಟ್ಟು ಓಡಿ ಹೋಗಿರುತ್ತಾನೆ.

ವಾಹನವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಕೆಎ-20-ಸಿ-812 ಎಂಬ ನಂಬರಿನ ಬಿಳಿ ನೀಲಿ ಬಣ್ಣದ ಟಿಪ್ಪರ್ ಆಗಿರುತ್ತದೆ. ಅದರ ಹಿಂಬದಿಯನ್ನು ಪರಿಶೀಲಿಸಿ ನೋಡಿದಾಗ ಹಿಂಬದಿ ಬಾಡಿಯಲ್ಲಿ ಮರಳು ತುಂಬಿದ ಪ್ಲಾಸ್ಟಿಕ್ ಚೀಲ ಗಳು ಇರುವುದು

ಕಂಡು ಬಂದಿರುತ್ತದೆ. ಸದ್ರಿ ಮರಳನ್ನು ಎಲ್ಲಿಯೋ ಅಕ್ರಮವಾಗಿ ಕಳುವು ಮಾಡಿ ತುಂಬಿಕೊಂಡು ಸಾಗಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ಪಂಚರ ಸಮಕ್ಷಮ ಸಂಜೆ 5-10 ರಿಂದ 6-15ರವರೆಗೂ ಪಂಚನಾಮೆ ಮೂಲಕ ವಶಕ್ಕೆ ಪಡೆದು, ನಂತರ 7-10 ಗಂಟೆಗೆ ಠಾಣೆಗೆ ಹಾಜರಾಗಿ ವರದಿಯನ್ನು ತಯಾರಿಸಿ 7-30 ಗಂಟೆಗೆ ಸದ್ರಿ ವಾಹನದ ಮಾಲೀಕರ ವಿರುದ್ದ ಠಾಣಾ ಗುನ್ಹಾ ನಂಬ್ರ 53/2017ರಂತೆ ಪ್ರಕರಣವನ್ನು ದಾಖಲಿಸಿಲಾಗಿರುತ್ತದೆ. ತನಿಖಾ ಸಮಯದಲ್ಲಿ ನಾನು ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಗೆ ಈಗ ನಿಪಿ-3ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ನಿಪಿ-10 ಮತ್ತು 11ನ್ನು ತೋರಿಸಲಾಗಿ ಸದ್ರಿ ಪೋಟೋದಲ್ಲಿ ಇರುವ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಯು ಎಸ್ ರವರಿಂದಃ**

ಠಾಣೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಎಷ್ಟು ದೂರ ಆಗುತ್ತದೆ ಎಂದರೆ ಸಾಕ್ಷಿ 20 ಕಿ.ಮೀ ಎಂದು ನುಡಿಯುತ್ತಾರೆ. ಠಾಣೆಯಿಂದ ನೀವು ಎಷ್ಟು ಗಂಟೆಗೆ ಹೊರಟಿರುತ್ತೀರಿ ಎಂದರೆ ಸಾಕ್ಷಿ 4-30 ಎಂದು ನುಡಿಯುತ್ತಾರೆ. ಅಲ್ಲಿಗೆ ತಲುಪುವಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿ 5 ಗಂಟೆ ಎಂದು ನುಡಿಯುತ್ತಾರೆ. ನೀವು ಎಷ್ಟು ದೂರದಿಂದ ಟೆಂಪೋ ವಾಹನವನ್ನು ನೋಡಿರುತ್ತೀರಿ ಎಂದರೆ ಸಾಕ್ಷಿ 200 ಮೀಟರ್ ಅಂತರದಿಂದ ನೋಡಿರುತ್ತೇವೆ ಎಂದು ನುಡಿಯುತ್ತಾರೆ. ಸದ್ರಿ ವಾಹನವು ಯಾವ ಕಡೆಯಿಂದ ಎಲ್ಲಿಗೆ ಹೊರಟಿತ್ತು ಎಂದರೆ ಸಾಕ್ಷಿ ಹೆಸ್ಕತ್ತೂರು ಗ್ರಾಮದ ಹಾರ್ಯಾಡಿಯಿಂದ ದಬ್ಬೆ ಕಟ್ಟೆಗೆ ಹೋಗುತ್ತಿತ್ತು ಎಂದು ನುಡಿಯುತ್ತಾರೆ.

ಆರೋಪಿಯು ನಿಮ್ಮನ್ನು ನೋಡಿ ಓಡಿ ಹೋಗಿರುತ್ತಾರಾ ಎಂದರೆ ಸಾಕ್ಷಿ ನಮ್ಮ ವಾಹನವನ್ನು ನೋಡಿ ಲಾರಿಯನ್ನು ಪಕ್ಕಕ್ಕೆ ನಿಲ್ಲಿಸಿ ಹಾಡಿ ಒಳಗೆ ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ದೂರದ ಹಿಂದೆ ಸದ್ರಿ ಲಾರಿಯನ್ನು ನಿಲ್ಲಿಸಿ ನಿಮ್ಮನ್ನು

ನೋಡಿ ಓಡಿ ಹೋಗಿರುತ್ತಾರೆ ಎಂದರೆ ಸಾಕ್ಷಿ 200 ಮೀಟರ್ ಎಂದು ನುಡಿಯುತ್ತಾರೆ. ಆರೋಪಿಯು ಹಾಡಿಯಲ್ಲಿ ಓಡಿ ಹೋಗಿದ್ದು ನಿಮಗೆ ನೋಡಲು ಸಿಕ್ಕಿರಲಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಆರೋಪಿಯನ್ನು ಹಿಡಿಯಲು ಪ್ರಯತ್ನಿಸಲಿಲ್ಲವಾ ಎಂದರೆ ಸಾಕ್ಷಿ ಪ್ರಯತ್ನ ಪಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

ಟೆಂಪೋದಲ್ಲಿ ಎಷ್ಟು ಚೀಲ ಮರಳು ಇತ್ತು ಎಂದರೆ ಸಾಕ್ಷಿ ಲೆಕ್ಕ ಮಾಡಿರುವುದಿಲ್ಲವೆಂದು ನುಡಿಯುತ್ತಾರೆ. ಯಾವ ಚೀಲದ ಮರಳು ತುಂಬಿತ್ತು ಎಂದರೆ ಸಾಕ್ಷಿ ಸಿಮೆಂಟ್ ಚೀಲ ಎಂದು ನುಡಿಯುತ್ತಾರೆ. ನೀವು ಅಳತೆ ಮಾಡಿರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಅಂದಾಜಿನಲ್ಲಿ ಎಷ್ಟು ಇತ್ತು ಎಂದರೆ ಸಾಕ್ಷಿ 6 ಮೆಟ್ರಿಕ್ ಟನ್ ಎಂದು ನುಡಿಯುತ್ತಾರೆ. ಎಷ್ಟು ಚೀಲಗಳು ಇದ್ದವು ಎಂದು ಮಹಜರಿನಲ್ಲಿ ನಮೂದಿಸಿರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ವಾಹನವನ್ನು ಏನು ಮಾಡಿರುತ್ತೀರಿ ಎಂದರೆ ಸಾಕ್ಷಿ ಚಾಸಾ-1 ರವರು ತಮಗೆ ಪರಿಚಯ ಇರುವ ಬೇರೆ ಚಾಲಕನನ್ನು ಕರೆಯಿಸಿ ಠಾಣೆಗೆ ತಂದಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿಯವರ ಹೆಸರು ಏನು ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಚಾಸಾ-1ರವರಿಗೆ ಗೊತ್ತು ಎಂದು ನುಡಿಯುತ್ತಾರೆ. ಪಂಚರನ್ನು ಎಲ್ಲಿಂದ ಕರೆಯಿಸಿರುತ್ತೀರಿ ಎಂದರೆ ಸಾಕ್ಷಿ ಹೆಸ್ಕತ್ತೂರು ಜಂಕ್ಷನ್ ನಿಂದ ಎಂದು ನುಡಿಯುತ್ತಾರೆ. ಸದ್ರಿಯವರನ್ನು ಯಾರು ಕರೆಯಿಸಿರುತ್ತಾರೆ ಎಂದರೆ ಸಾಕ್ಷಿ ಚಾಸಾ1ರವರೇ ನಾವು ಹೋಗುವಾಗ ಜೀಪಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಪಂಚರನ್ನು ಕರೆದುಕೊಂಡು ಹೋಗಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಯಾವ ದಿನ ಹೇಳಿಕೆ ನೀಡಿರುತ್ತೀರಿ ಎಂದರೆ ಸಾಕ್ಷಿ ಅದೇ ದಿನ ಠಾಣೆಯಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಮಹಜರನ್ನು ಯಾವಾಗ ಜರುಗಿಸಿದ್ದು ಎಂದರೆ ಸಾಕ್ಷಿ ಅದೇ ದಿನ ಎಂದು ನುಡಿಯುತ್ತಾರೆ. ಮಹಜರನ್ನು ಹೊಳೆಯ ಹತ್ತಿರ

ಮಾಡಿರುತ್ತೀರಾ ಎಂದರೆ ಸಾಕ್ಷಿ ಹೊಳೆಯ ಸ್ವಲ್ಪ ದೂರದಲ್ಲಿ ಎಂದು ನುಡಿಯುತ್ತಾರೆ. ವಾಹನವನ್ನು ಜಪ್ತಿ ಮಾಡಿಕೊಂಡ ಸ್ಥಳದಲ್ಲಿಯೇ ಮಹಜರನ್ನು ಜರುಗಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಸದ್ರಿ ದಿನದಂದು ಮಹಜರನ್ನು ಜರುಗಿಸಿರುವುದಿಲ್ಲ ಠಾಣೆಯಲ್ಲಿ ಮಹಜರನ್ನು ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹೇಳುವ ಪಂಚರು ಹಾಜರು ಇದ್ದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಹಾಗೂ ರಾಜಕೀಯ ಒತ್ತಡದ ಮೇರೆಗೆ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**